15	ಕೋಲಾರ	22.75	51
16	ಚಾಮರಾಜನಗರ	13.00	30
17	ಹಾವೇರಿ	25.85	48
18	ಶಿವಮೊಗ್ಗ	21.50	35
19	ಬಿಜಾಪುರ	15.75	23
20	ಉತ್ತರ ಕನ್ನಡ	7.75	27
21	ಗದಗ್	10.00	27
22	ಹಾಸನ	20.30	39
23	ಧಾರವಾಡ	6.25	16
24	ಬಾಗಲಕೋಟೆ	7.00	23
25	ರಾಯಬಾರು	32.10	69
25	ರಾಯಚೂರು	32.10	69
26	ಬೆಳಗಾಂ	36.40	109
27	ಬಳ್ಳಾರಿ	45.30	70
	ಒಟ್ಟು	**567.35**	**1145**

ಸರ್ಕಾರದ ಆದೇಶ ಸಂಖ್ಯೆ : ಕೆಂಇ 60/ಮುಅಬಿ / 2005 ದಿನಾಂಕ: 23–3–05 ರಲ್ಲಿ ರೂ. 8.45 ಲಕ್ಷಗಳ ಬಿಲ್ಲು ಖಜಾನೆಯಲ್ಲಿ ತೇರ್ಗಡೆಗೊಳ್ಳದೆ ಇರುವುದರಿಂದ, ಮಂಜೂರಾದ ಒಟ್ಟು ಹಣ ರೂ. 8.45 ಗಳನ್ನು ಮತ್ತು ಸರ್ಕಾರದ ಆದೇಶ ಸಂಖ್ಯೆ ಕಂಇ 47/ಮುಅಬಿ/2005, ದಿನಾಂಕ: 28-3-05ರಲ್ಲಿ ರೂ. 38.00 ಲಕ್ಷಗಳ ಬಿಲ್ಲು ಖಜಾನೆಯಲ್ಲಿ ತೇರ್ಗಡೆಗೊಳ್ಳದಿರುವುದಗಿಂದ ಸದರಿ ಮೊತ್ತವನ್ನು ಜಿಲ್ಲಾವಾರು ಬಿಡುಗಡೆಗೊಳಿಸಿರುವುದಿಲ್ಲ.

ಘೋಷ್ವಾರೆ

1	2004–05ನೇ ಸಾಲಿನಲ್ಲಿ ಆಯ–ವ್ಯಯದಲ್ಲಿ ನಿಗಧಿಪಡಿಸಲಾದ ಹಣ.	613.8ರ
2	ಜಿಲ್ಲಾವಾರು ಬಿಡುಗಡೆ ಮಾಡಿರುವ ಹಣ	567.35
3	ತೇರ್ಗಡೆಯಾಗದೆ ಬಾಕಿ ಉಳಿದಿರುವ ಹಣ	46.45

5237 (5805) ಶ್ರೀ ಎಸ್.ಬಾಲರಾಜ್ (ಕೊಳ್ಳೇಗಾಲ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರಿಸಿ ಯಡಕುರಿಯಾ ಮಾಂಬಳ್ಳಿ ಕುಣಗಳ್ಳಿ ಮದ್ದೂರು ಬೂದಿತಿಟ್ಟು ಅಂಬಳೆ, ಚಾಮುಂಡೇಶ್ವರಿ ದೇವಸ್ಥಾನದ ಮಾರ್ಗ ಕಂದಳ್ಳಿಗೆ ಸೇತುವೆ ನಿರ್ಮಿಸಲು ತುಂಬಾ ಒತ್ತಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಯಾವ ಯೋಜನೆಯಡಿ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು;

ಇ) ಎಷ್ಟು ಕಾಲಾವಧಿಯಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು;

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ/ ರಾಜ್ ಸಚಿವರು) :

ಅ) ಬಂದಿರುತ್ತದೆ.

ಆ) ಈ ಕಾಮಗಾರಿಯನ್ನು ನಬಾರ್ಡ್ ನೆರವಿನ ಆರ್ ಐ ಡಿ ಎಫ್-XIರಡಿ ಲೋಕೋಪಯೋಗಿ ಇಲಾಖೆಯ ಮುಖಾಂತರ ನಿರ್ಮಿಸಲು ಯೋಜಿಸಲಾಗಿದೆ.

ಇ) ಸದರಿ ಕಾಮಗಾರಿಗೆ ನಬಾರ್ಡ್‌ನಿಂದ ಅನುಮೋದನೆ ದೊರಕಿದ ನಂತರ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿ, ಒಂದು ವರ್ಷದ ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು.

5238(5806) ಶ್ರೀ ಎಸ್. ಬಾಲರಾಜ್ (ಕೊಳ್ಳೇಗಾಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿ.ಆರ್.ಎಫ್.ನಡಿ ಚಾಮರಾಜನಗರ ಜಿಲ್ಲೆಗೆ ನೀಡಿರುವ ಹಣ ಎಷ್ಟು ?

ಆ) ಸಿ.ಆರ್.ಎಫ್ ನಡಿ ಜಿಲ್ಲೆಯ ವಿವಿಧ ಕ್ಷೇತ್ರಕ್ಕೆ ನೀಡಿರುವ ಹಣ ಎಷ್ಟು ?

ಇ) ಈ ಯೋಜನೆಯಡಿ ತೆಗೆದುಕೊಂಡಿರುವ ಕಾಮಗಾರಿಗಳ ವಿವರಗಳನ್ನು ನೀಡಲಾಗುವುದೇ ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) 2001–02 ರೂ. 61.00 ಲಕ್ಷ
2005–06 ರೂ. 130.00 ಲಕ್ಷ
ರೂ. 191.00 ಲಕ್ಷ

ಆ) ಸಂತೇಮರಳ್ಳಿ ಕ್ಷೇತ್ರ ರೂ. 61.00 ಲಕ್ಷ (2001–02)
ಹನೂರು ಕ್ಷೇತ್ರ ರೂ. 50.00 ಲಕ್ಷ (2005–06)
ಗುಂಡ್ಲುಪೇಟೆ ಕ್ಷೇತ್ರ ರೂ. 40.00 ಲಕ್ಷ (2005–06)
ಕೊಳ್ಳೇಗಾಲ ಕ್ಷೇತ್ರ ರೂ. 40.00 ಲಕ್ಷ (2005–06)
ಒಟ್ಟು ರೂ. 191.00 ಲಕ್ಷ

ಇ) **2001–2002ನೇ ಸಾಲಿನಲ್ಲಿ**

ಕ್ರಸಂ: ಕಾಮಗಾರಿಯ ಹೆಸರು

(ಅ) ಸರಗೂರು ಹೊಂಗಾರಿಯ ರಸ್ತೆಯ ಅಭಿವೃದ್ಧಿ ಕಾಮಗಾರಿ

2005–2006 ನೇ ಸಾಲಿನಲ್ಲಿ

(ಆ) ಹನೂರು ಬಂಡಳ್ಳಿ ರಸ್ತೆಯ ಸರಪಳಿ 25.00 ರಿಂದ 35.00 ಕಿಮೀ ವರೆಗೆ 25.00 ರಿಂದ 35.00 ಕಿಮೀ ವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿ.

(ಇ) ಬೇಗೂರು ಕೌಲಂದೆ ರಸ್ತೆ ಅರಳಿಕಟ್ಟೆ ಮಾರ್ಗ ನಿಟ್ರಿ ಹಾಲಳ್ಳಿ 0.00 ರಿಂದ 9.80 ಕಿಮೀ ವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿ